**ಕರ್ನಾಟಕ ಸರ್ಕಾರ**

ಸಂ.ಡಿಟಿಇ/39/ಎಸ್‌ಸಿಹೆಚ್(1)2010-11

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001.
ದಿನಾಂಕ:21-04-2011.

**-:: ಸುತ್ತೋಲೆ ::-**

**ವಿಷಯ:-** 2006-07ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಸಿಇಟಿ ಮೂಲಕ ಹೆಚ್ಚುವರಿ ಶುಲ್ಕ (₹ 88,090/-) ಕೋಟಾದಡಿ ಪ್ರವೇಶ ಪಡೆದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಸಹಾಯಧನ ನೀಡುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರದ ಆದೇಶ ಸಂ.ಇಡಿ/123/ಟಿಇಸಿ/2006, ದಿನಾಂಕ:22-06-2007.
2. ಸರ್ಕಾರದ ಆದೇಶ ಸಂ. ಇಡಿ/159/ಟಿಇಸಿ/2008, ದಿ:15-12-2010.
3. ಸರ್ಕಾರದ ಆದೇಶ ಸಂ. ಇಡಿ/159/ಟಿಇಸಿ/2008, ದಿ:08-01-2011.

-0000000-

ವಿಷಯಕ್ಕೆ ಸಂಬಂಧಿಸಿದಂತೆ, 2006-07ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಸಿಇಟಿ ಮೂಲಕ ಹೆಚ್ಚುವರಿ ಶುಲ್ಕ (₹ 88,090/-) ಕೋಟಾದಡಿ ಪ್ರವೇಶ ಪಡೆದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 2008-09 ಮತ್ತು 2009-10ನೇ ಸಾಲಿನ ಶುಲ್ಕ ಸಹಾಯಧನ ಮಂಜೂರು ಮಾಡುವ ಸಂಬಂಧದಲ್ಲಿ ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2007-08ನೇ ಸಾಲಿನಲ್ಲಿ ಹಾಗೂ ಮುಂದಿನ ವರ್ಷಗಳಲ್ಲಿ ಉತ್ತೀರ್ಣರಾಗಿದ್ದು, ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಮಂಜೂರು ಮಾಡಬೇಕಾಗಿರುತ್ತದೆ. ಈ ಬಗ್ಗೆ ಈ ಕಛೇರಿ ಸುತ್ತೋಲೆ ದಿನಾಂಕ:15-01-2010ರಲ್ಲಿ ಸೂಚಿಸಲಾಗಿರುತ್ತದೆ.

ಪ್ರಯುಕ್ತ, 2008-09ನೇ ಸಾಲಿನ ಶುಲ್ಕ ಸಹಾಯಧನವನ್ನು ಮಂಜೂರು ಮಾಡಬೇಕಾಗಿದ್ದು, ಸದರಿ ಸಾಲಿನಲ್ಲಿ ಅರ್ಹತೆಯಿರುವ / ಅರ್ಹತೆಯಿಲ್ಲದೆ ಇರುವ ಹಾಗೂ 2009-10ನೇ ಸಾಲಿನಲ್ಲಿಯೂ ಸಹ ಅರ್ಹತೆಯಿರುವ / ಅರ್ಹತೆಯಿಲ್ಲದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಸಂಸ್ಥೆಯ ಪ್ರಿನ್ಸಿಪಾಲರು ಧೃಡೀಕರಿಸಿ ಇಂದೇ ತಲುಪುವಂತೆ ತುರ್ತಾಗಿ ಕಳುಹಿಸಿಕೊಡಲು ಸೂಚಿಸಲಾಗಿದೆ.

ಶುಲ್ಕ ಸಹಾಯಧನಕ್ಕೆ ಸಂಬಂಧಿಸಿದಂತೆ ಸಂಸ್ಥೆಯಿಂದ ವಿವರವನ್ನು ಈ ಕಛೇರಿಗೆ ತುರ್ತಾಗಿ ಈ ಕೆಳಕಂಡ ಇ-ಮೇಲ್ ಮುಖಾಂತರವು ಸಹ ಕಳುಹಿಸಬಹುದಾಗಿರುತ್ತದೆ.

**dteacm@hotmail.com**

ಕಶಜಂ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು

**ಇವರಿಗೆ,**
ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಪ್ರತಿ:-
1. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂ.ಶಿ.ನಿ, ಬೆಂಗಳೂರು.
2. ಕಡತಕ್ಕೆ.